(ಇಂದು ದಿನಾಂಕಃ 14-11-2024 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀ ಆರ್.ಎಸ್.ಎಚ್.(ಜಿ) ವಕೀಲರಿಂದಃ**

ನಾನು ಡಿ.ವಿ. ಅರ್ಜಿ ನಂ. 79/2019 ನನ್ನ ಗಂಡ ಮತ್ತು ನನ್ನ ಗಂಡನ ಕುಟುಂಬದವರ ಮೇಲೆ ದಾಖಲಿಸಿದ್ದೆ ಎಂದರೆ ಸರಿ. ಅದರಲ್ಲಿ ನನ್ನ ಮಾವ 2 ನೇ ಎದುರುದಾರರಾಗಿದ್ದರು ಎಂದರೆ ಸರಿ. ಅದರಲ್ಲಿ ನಾನು ನನ್ನ ಮಾವ ಭೂ ಪರಿಹಾರದ ಎಲ್ಲಾ ಹಣವನ್ನು ಪಡೆದಿದ್ದು ನನ್ನ ಗಂಡನಿಗೆ ರೂ. 11,00,000-00 ಎಂದು ಬರೆದಿದ್ದೆ ಎಂದರೆ ಸರಿ. ನನ್ನ ಮಾವ ರೂ. 48 ಲಕ್ಷ ಪಡೆದಿದ್ದಾರೆ ಎಂದು ಬರೆಸಿರುತ್ತೇನೆ ಎಂದರೆ ಸರಿ, ಆದರೆ ಅದು ತಪ್ಪಾಗಿರುತ್ತದೆ. ಅವರು ರೂ. 65 ಲಕ್ಷ ಪಡೆದಿದ್ದಾರೆ ಎನ್ನುವರು. ನನ್ನ ವಾದ ಪತ್ರದ ಪ್ಯಾರಾ ನಂ. 3 ರಲ್ಲಿ ನಾನು ನನ್ನ ಗಂಡನ ಪಾಲಿಗೆ ರೂ. 12 ಲಕ್ಷ ಬರುತ್ತದೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ನಾನು ಡಿ.ವಿ. ಅರ್ಜಿಯಲಲ್ಲಿ ಹೇಳಿದ ವಿಷಯವನ್ನು ಈ ಸಂಬಂಧವಾಗಿ ಇದರಲ್ಲಿ ಹೇಳಿದ್ದೇನೆ ಎಂದರೆ ಸರಿ. 48 ಲಕ್ಷ ನನ್ನ ಮಾವ ಭೂ ಪರಿಹಾರ ಪಡೆದಿದ್ದಾರೆ ಎಂದು ತೋರಿಸಲು ನಾನು ಯಾವುದೇ ದಾಖಲೆ ಹಾಜರು ಮಾಡಿಲ್ಲ.

ನನ್ನ ಗಂಡ 16 ಲಕ್ಷ ರೂಪಾಯಿಯನ್ನು ತನ್ನ ಬ್ಯಾಂಕ್ ಖಾತೆಯಲ್ಲಿ ಇಟ್ಟಿರುತ್ತಾರೆ ಎಂದು ಹೇಳಿರುತ್ತೇನೆ. ಆ ಹಣವನ್ನು ನನ್ನ ಗಂಡ ತೀರಿಕೊಂಡ ನಂತರ ನಾನು ಪಡೆದಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ಹೆಸರಿನಲ್ಲಿ FD ಇತ್ತು. ಅದಕ್ಕೆ ನಾನೇ ನಾಮಿನಿ ಇದ್ದೆ. ಆ FD ಹಣವನ್ನು ನಾನು ನನ್ನ ಗಂಡ ತೀರಿಕೊಂಡ ನಂತರ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ತಿಗೆ ಸಂಬಂಧಪಟ್ಟ ಭೂ ಪರಿಹಾರ ಹಣವನ್ನು ನನ್ನ ಗಂಡನಿಗೆ ಅವರು ಜೀವಂತ ಇದ್ದಾಗ ಅವರಿಗೆ ಕೊಟ್ಟಿರುತ್ತಾರೆ.

ದಾವಾ ಪತ್ರ ಶೆಡ್ಯೂಲ್‌ನಲ್ಲಿ ಮನೆ ನಂಬರವನ್ನು ಬರೆದಿಲ್ಲ ಎಂದರೆ ಸರಿ. ನನ್ನ ಗಂಡನಿಗೆ ಮತ್ತು 2 ರಿಂದ 4 ನೇ ಪ್ರತಿವಾದಿಯರಿಗೆ ಸಂಬಂಧಪಟ್ಟ ಆಸ್ತಿ ದಾವಾಸ್ತಿ ಆಗಿರುತ್ತದೆ ಎಂದರೆ ಸರಿ. ನನ್ನ ಗಂಡನ

ಪಾಲಿಗೆ ಸೇರಿದ ದಾವಾಸ್ತಿಯಲ್ಲಿರುವ ಅವರ 1/4 ಅಂಶ ಅಕ್ಕನ್ನು ಅವರು 4 ನೇ ಪ್ರತಿವಾದಿಯ ಮಗನಿಗೆ ವಿಲ್‌ನಾಮೆ ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ವಿಲ್‌ನಾಮೆಗೆ ಸಂಬಂಧಿಸಿ ಇನ್ನೊಂದು ಸಿವಿಲ್ ದಾವೆ ನಡೆಯುತ್ತಿದೆ ಎಂದರೆ ಸರಿ. ಆ ದಾವೆಯಲ್ಲಿ ನಾನು ಹಾಜರಾಗಿ ತಕರಾರು ಸಲ್ಲಿಸಿರುತ್ತೇನೆ ಎಂದರೆ ಸರಿ. ಎಲ್ಲಾ ವಿಷಯಗಳ ಬಗ್ಗೆ ಮಾಹಿತಿ ಇದ್ದರೂ ಸಹ ಆಸ್ತಿ ಬಂದರೆ ಬರಲಿ ಎಂದು ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ತಿಗಳಲ್ಲಿ ನನಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಪರಿಹಾರ ಹಣದಲ್ಲಿಯೂ ಸಹ ಪಾಲು ಪಡೆಯಲು ನನಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ಹೇಳಿರುವ ವಿಳಾಸದಲ್ಲಿ ವಾಸಿಸುವುದಿಲ್ಲ. ಕೋಡಿಭಾಗ್‌ನಲ್ಲಿ ವಾಸಿಸುತ್ತೇನೆ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್, ಕಾರವಾರ